ಶ್ರೀಗುರುಬಸವಲಿಂಗಾಯನಮಃ

ಎಸ್.ಜೆ.ಎಂ. ವಿದ್ಯಾಪೀಠ (ರಿ.)

ಎಸ್.ಜೆ.ಎಂ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, (IQAC)

ಎಸ್.ಜೆ.ಎಂ. ಡೆಂಟಲ್ ಕಾಲೇಜು ಆವರಣ, ಬಿ.ಡಿ.ರಸ್ತೆ, ಚಿತ್ರದುರ್ಗ

ಹಾಗೂ

ಅಲ್ಲಮಪ್ರಭು ಸಂಶೋಧನಾ ಕೇಂದ್ರ

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

ಇವರ ಸಂಯುಕ್ತಾಶ್ರಯದಲ್ಲಿ

ಅಂತಾರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್)

ವಿಷಯ : ಅಲ್ಲಮಪ್ರಭು ಮತ್ತು ಇತರ ಶೈವ ಪಂಥಗಳು

ಉದ್ಘಾಟನೆ ಹಾಗೂ ದಿಕ್ಸೂಚಿ ನುಡಿ

ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು

ತ್ರಿವಿಧ ದಾಸೋಹಿಗಳು, ಶೂನ್ಯಪೀಠಾಧ್ಯಕ್ಷರು

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

ದಿನಾಂಕ : 20.08.2020, ಗುರುವಾರ । ಸಂಜೆ 6.00 ಗಂಟೆಗೆ (ಐಎಸ್‌ಟಿ)

zoom

Meeting ID : 864 8037 4960

Passcode : sjmacc123

ವಿಷಯ ಚಿಂತನೆ : ವರ್ತಮಾನದಲ್ಲಿ ಅಲ್ಲಮನ ಸಂದೇಶ

ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು

ಚಿಂತನ ವಿಷಯ :
ಅಲ್ಲಮಪ್ರಭು ಮತ್ತು ಇತರ ಶೈವ ಪಂಥಗಳು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ವಿಶ್ರಾಂತ ಕುಲಪತಿಗಳು ಹಾಗು ವಚನಸಾಹಿತ್ಯ ಚಿಂತಕರು
ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು

ವಿಷಯ :
ಅಲ್ಲಮಪ್ರಭು ವಚನ ಚಿಂತನ

ಡಾ. ಶ್ರೀಶೈಲ ಹಾದಿಮನಿ
ಅಧ್ಯಕ್ಷರು, ವೀರಶೈವ ಸಮಾಜ
ಉತ್ತರ ಅಮೇರಿಕ

: ಉಪಸ್ಥಿತಿ :

ಶ್ರೀ ಎಂ.ಜಿ. ದೊರೆಸ್ವಾಮಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ

ಡಾ. ಪಿ. ಶಿವಲಿಂಗಪ್ಪ
ಪ್ರಾಂಶುಪಾಲರು
ಎಸ್‌ಜೆಎಂ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ

ಶ್ರೀ ಎ.ಜೆ. ಪರಮಶಿವಯ್ಯ
ಕಾರ್ಯದರ್ಶಿಗಳು
ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ

ಪ್ರೊ. ಎನ್. ಚಲುವರಾಜು
ಸಂಚಾಲಕರು, ಐಕ್ಯೂಎಸಿ
ಎಸ್.ಜೆ.ಎಂ. ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ

ಕಾರ್ಯಕ್ರಮ ನಿರ್ದೇಶಕರು
ಡಾ. ಸಿ.ಟಿ.ಜಯಣ್ಣ
ಮುಖ್ಯಸ್ಥರು, ಕನ್ನಡ ವಿಭಾಗ
9886840737

ಸಂಯೋಜಕರು
ಡಾ. ಸಿ. ಸುಧಾರಾಣಿ
ಉಪನ್ಯಾಸಕರು
ಕನ್ನಡ ವಿಭಾಗ

ಭಾಗವಹಿಸಿದ ಸಹೃದಯರಿಗೆ ಇ-ಪ್ರಮಾಣ ಪತ್ರ ವಿತರಿಸಲಾಗುವುದು
ದಿನಾಂಕ : 20.08.2020 ಗುರುವಾರ | ಸಂಜೆ : 6.00 ಗಂಟೆಗೆ (ಐಎಸ್‌ಟಿ)

S J M ARTS COLLEGE FOR WOMEN, CHITRADURGA (IQAC)

&

Allamaprabhu Research Centre

Sri Jagadguru Murugha Rajendra Bruhanmath, Chitradurga

In Association with

International Webinar on

Allamaprabhu & Other Shaiva Cults

Date: 20.08.2020 **Time: 6.00 PM**

Place: SJM Women's Rajatha Sabhangana

Invocation Song	:	Kum. Ramya.
Resource Persons	:	Subject :Allama Message of his Present 1. Dr. Shivamurthy Murugha Sharanaru Subject: Thinking of Allamaprabhu Vachana 2. Dr. Srishaila Hadimani President, Veerashaiva Samaja North America Subject: Allamaprabhu and other Veerashaiva Cults 3. Dr. Mallepuram G. Venkatesh Rtd. Vice Chancellor Sanskrit University, Bangalore
Presence	:	Sri. A.J. Paramashivaiah Secretary, S J M Vidyapeetha Dr. P. Shivalingappa Principal, SJM Arts College for Women, Chitradurga Sri. N. Chaluvaraju Chief Librarian & IQAC Co-ordinator

PRINCIPAL
S.J.M. Arts College for women
CHITRADURGA - 577 501
Karnataka.

SJM Arts College for Women,Chitradurga (IQAC) Dept of Kannada and Allamaprabhu Research Centre, Sri Murugha Math,Chitradurga In association with International Webinar on Allamaprabhu and other Shaiva Cults on 20 -08-2020 at 6 PM His Holiness Dr Shivamurthy Murugha Sharanaru Inauguration of this Webinar and Speaking Inaugural address.Prof Mallepuram G Venkatesh Rtd Vice Chancellor Sanskrit University,Bangalore and Dr Srishaila Hadimani President, Veerashaiva Samaja North America speaking as Resource persons.

02

ಕನ್ನಡಪ್ರಭ

ಸೋಮವಾರ 24.8.2020

ಅಲ್ಲಮನ ಹೆಜ್ಜೆಯಲ್ಲಿ ಗಾಳಿ ತೀವ್ರತೆ

ಅಲ್ಲಮಪ್ರಭು ಮತ್ತು ಇತರ ಶೈವ ಪಂಥಗಳು ಕುರಿತ ಅಂತಾರಾಷ್ಟ್ರೀಯ ವೆಬಿನಾರ್ ಉದ್ಘಾಟನೆಯಲ್ಲಿ ಶಿಮುಶ

• **ಕನ್ನಡಪ್ರಭವಾರ್ತೆ,** ಚಿತ್ರದುರ್ಗ

ಅಲ್ಲಮನ ಹೆಜ್ಜೆಯಲ್ಲಿ ಗಾಳಿಯಂಥ ತೀವ್ರತೆ ಇತ್ತು. ಆತನೊಬ್ಬ ಮಹಾಜಂಗಮ. ಜಂಗಮ ಎಂದರೆ ಚಲನಶೀಲತೆ, ಕ್ರಿಯಾಶೀಲತೆ. ಅನೇಕರನ್ನು ದರಿದ್ರತನದಿಂದ ಬಡಿದೆಚ್ಚರಿಸುವ ಕೆಲಸ ಅವರು ಮಾಡಿದ್ದಾರೆಂದು ಡಾ. ಶಿವಮೂರ್ತಿಮುರುಘಾ ಶರಣರು ಹೇಳಿದರು.

ಅಲ್ಲಮಪ್ರಭು ಸಂಶೋಧನಾ ಕೇಂದ್ರ, ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಸಹಯೋಗದಲ್ಲಿ ನಡೆದ ಅಲ್ಲಮಪ್ರಭು ಮತ್ತು ಇತರ ಶೈವ ಪಂಥಗಳು ವಿಷಯ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ (ವೆಬಿನಾರ್) ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಬಸವಣ್ಣನವರನ್ನು ಕುರಿತು ಹಲವಾರು ಪುಸ್ತಕಗಳು ಪ್ರಕಟವಾಗಿವೆ. ಆದರೆ ಮೇರುಸದೃಶ ವ್ಯಕ್ತಿತ್ವದ ಅಲ್ಲಮಪ್ರಭುದೇವರ ಬಗ್ಗೆ ಅಷ್ಟಾಗಿ ಸಂಶೋಧನೆ ನಡೆದಿಲ್ಲ, ಆ ಹಿನ್ನೆಲೆಯಲ್ಲಿ ಇದೊಂದು ಹೆಜ್ಜೆಯಾಗಿದೆ ಎಂದರು.

ಶ್ರೀಮಠದಲ್ಲಿ ಸ್ಥಾಪನೆಯಾಗಿರುವ ಸಂಶೋಧನಾ

ಕೇಂದ್ರದ ಮೂಲಕ ಅನೇಕ ಕಾರ್ಯಗಳನ್ನು ಮಾಡಲಾಗುತ್ತಿದೆ. ಅಲ್ಲಮಪ್ರಭುವಿನದು ಒಂದುರೀತಿಯ ವಿಲಕ್ಷಣ ವ್ಯಕ್ತಿತ್ವ, ಆ ದಿಸೆಯಲ್ಲಿ ಬಸವಣ್ಣನವರಿಗೆ 770 ಅಮರಗಣಂಗಳನ್ನು ಒದಗಿಸಿದ್ದು ಸಮಸ್ಯೆಯಾಗಿರಲಿಲ್ಲ. ಬಸವಣ್ಣನವರಿಗೆ ಅಲ್ಲಮನಂತಹ ಚಿಕಿತ್ಸಕನನ್ನು ಅನುಭವ ಮಂಟಪದಲ್ಲಿ ಹಿಡಿದಿಟ್ಟುಕೊಳ್ಳುವ ಕೆಲಸ ದೊಡ್ಡದಾಗಿತ್ತು ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ನಾಗಾರ್ಜುನ, ಆಚಾರ್ಯ ಶಂಕರರು, ಅಭಿನಂದ ಪಾದರು ಮೊದಲಾದವರನ್ನು ನೆನಪಿಸಿಕೊಳ್ಳಬೇಕು. ಇವರು ಹೊಸ ಹಾದಿಯನ್ನು ನಿರ್ಮಿಸಿದರು. ಇವರ ನಂತರ ಅಲ್ಲಮಪ್ರಭುಗಳು ಬಂದರು. ಈಸಂದರ್ಭದಲ್ಲಿ ತಮಿಳುನಾಡಿನ ನಾಯಾನ್ಮಾರರ ಪರಂಪರೆಗಳನ್ನು ನೋಡಬಹುದು. ಜೈನಸಿದ್ಧರು, ಬೌದ್ಧಸಿದ್ಧರು ಇನ್ನೂ ಅನೇಕ ಸಿದ್ಧರು ಇದ್ದರು. ನಾಥರು, ಜೈನಸಿದ್ಧರ ಬಗೆಗೆ ಅಲ್ಲಮಪ್ರಭುಗಳು ಮಾತನಾಡುತ್ತಾರೆ. ಅಲ್ಲಮಪ್ರಭು ಅರ್ಥ ಮಾಡಿಕೊಳ್ಳಬೇಕಾದರೆ ನಾಯಾನ್ಮಾರರನ್ನು ಅರ್ಥೈಸಿಕೊಳ್ಳಬೇಕು ಎಂದರು.

ಉತ್ತರ ಅಮೆರಿಕಾದ ವೀರಶೈವ ಸಮಾಜದ ಅಧ್ಯಕ್ಷ ಡಾ. ಶ್ರೀಶೈಲ ಹಾದಿಮನಿ ಮಾತನಾಡಿ, ಅಲ್ಲಮ ಎಂದರೆ ವಿಸ್ತಾರ. ಅಲ್ಲಮನನ್ನು ಶಬ್ದದಲ್ಲಿ ವಿಶ್ಲೇಷಿಸುವುದಾಗಲಿ, ಹಿಡಿದಿಡಿವುದಾಗಲಿ ಕಷ್ಟದ ಕೆಲಸ. ಅಲ್ಲಮಪ್ರಭು ಮಹಾನುಭಾವರು. ಅವರ ಮಾತುಗಳು ಜ್ಞಾನಪೂರ್ಣ. ನಮ್ಮ ಮನಸ್ಸನ್ನು ಪ್ರೀತಿಸಿದರೆ ಮಾತು ಪವಿತ್ರ ಆಗುತ್ತದೆ. ಅಂತಹ ಮಾತುಗಳನ್ನು ದಾರ್ಶನಿಕರು, ಸಂತರು, ಶರಣರು ಹೇಳುತ್ತಾರೆ. ಶರಣರಮಾತುಗಳು ಪರಿಶುಭ್ರವಾದುವು ಎಂದರು. ಎಸ್‌ಜೆಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಪಿ. ಶಿವಲಿಂಗಪ್ಪ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸಿ.ಟಿ. ಜಯಣ್ಣ ಕಾರ್ಯಕ್ರಮ ನಿರೂಪಿಸಿದರು. ಪ್ರೊ.ಪಿ.ಸಿ. ಗಾಯತ್ರಿ ಮತ್ತು ಪ್ರೊ. ಎನ್. ಚಲುವರಾಜ್ ಅತಿಥಿಗಳ ಪರಿಚಯ ಮಾಡಿಕೊಟ್ಟರು.

Kannada Prabha, Kannada Daily News Paper on 24 - 08- 2020

PRINCIPAL
S.J.M. Arts College for women
CHITRADURGA - 577 501
Karnataka.

ಪ್ರಜಾವಾಣಿ - ೨೨.೭.೨೦೨೦

ಅಲ್ಲಮಪ್ರಭುದೇವರದು ಮೇರುಸದೃಶ ವ್ಯಕ್ತಿತ್ವ

■ ಅನುಭವ ಮಂಟಪದಲ್ಲಿ ಅಲ್ಲಮನಂತಹ ಚಿಕಿತ್ಸಕನನ್ನು ಹಿಡಿದಿಟ್ಟುಕೊಳ್ಳುವ ಕೆಲಸ ಮಹತ್ವದ್ದಾಗಿತ್ತು

ಚಿತ್ರದುರ್ಗ: ಅಲ್ಲಮನ ಹೆಜ್ಜೆಯಲ್ಲಿ ಗಾಳಿಯಂಥ ತೀವ್ರತೆ ಇತ್ತು. ಆತನೊಬ್ಬ ಮಹಾಜಂಗಮ ಎಂದು ಡಾ। ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಎಸ್‌ಜೆಎಂ ವಿದ್ಯಾಪೀಠ, ಅಲ್ಲಮಪ್ರಭು ಸಂಶೋಧನಾ ಕೇಂದ್ರ, ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಸಹಯೋಗದಲ್ಲಿ ನಡೆದ ಅಲ್ಲಮಪ್ರಭು ಮತ್ತು ಇತರ ಶೈವ ಪಂಥಗಳು ವಿಷಯ ಕುರಿತ ಅಂತಾರಾಷ್ಟ್ರೀಯ ವಿಚಾರಸಂಕಿರಣ(ವೆಬಿನಾರ್) ಉದ್ಘಾಟಿಸಿ ಶರಣರು ಮಾತನಾಡಿದರು.

ಬಸವಣ್ಣನವರ ಕುರಿತು ಹಲವಾರು ಪುಸ್ತಕಗಳು ಪ್ರಕಟವಾಗಿವೆ. ಸಾಹಿತಿಗಳು ಸಾಹಿತ್ಯ ರಚಿಸಿದ್ದಾರೆ. ಆದರೆ ಮೇರುಸದೃಶ ವ್ಯಕ್ತಿತ್ವ ಹೊಂದಿದ್ದ ಅಲ್ಲಮಪ್ರಭುದೇವರ ಬಗ್ಗೆ ಅಷ್ಟಾಗಿ ಸಂಶೋಧನೆ ನಡೆದಿಲ್ಲ. ಈ

ಚಿತ್ರದುರ್ಗ: ವೆಬಿನಾರ್‌ನಲ್ಲಿ ಡಾ। ಶಿವಮೂರ್ತಿ ಮುರುಘಾ ಶರಣರು ಹಾಗೂ ಮಲ್ಲೇಪುರಂ ಜಿ. ವೆಂಕಟೇಶ್ ಪಾಲ್ಗೊಂಡಿದ್ದರು.

ಹಿನ್ನೆಲೆಯಲ್ಲಿ ಇದೊಂದು ಹೆಜ್ಜೆಯಾಗಿದೆ. ಅಲ್ಲಮಪ್ರಭುವಿನದು ಒಂದು ರೀತಿಯ ವಿಲಕ್ಷಣ ವ್ಯಕ್ತಿತ್ವ. ಆತನ ಬದುಕು-ಬರಹ ಒಂದು ರೀತಿಯಲ್ಲಿ ವಿಸ್ಮಯ. ಆ ದಿನೆಯಲ್ಲಿ ಬಸವಣ್ಣನವರಿಗೆ 770 ಅಮರಗಣಂಗಳನ್ನು ಒದಗಿಸಿದ್ದು ಸಮಸ್ಯೆಯಾಗಿರಲಿಲ್ಲ.

> ಜೀವನ ಎಂದರೆ ಸುಖದ ಸುಪ್ತಿಗೆಯಲ್ಲ. ಅನೇಕ ರೀತಿಯಲ್ಲಿ ಕೆಡಕು, ಒಡಕು ಎಲ್ಲವೂ ಇರುತ್ತದೆ. ಅದನ್ನು ಮೆಟ್ಟಿನಿಲ್ಲಬೇಕು. ಬೆಳಗಿನೊಳಗಿನ ಬೆಳಗು ಅಲ್ಲಮವಾಗಿದ್ದಾನೆ. ಅದು ಮಹಾಬೆಳಗು ಅಂದರೆ ಶಿವ ಬೆಳಗು. ಅಲ್ಲಮನ ಬದುಕು ಒಳಹು ಹೌದು, ಬೆಳಗೂ ಹೌದು.
>
> ● ಡಾ। ಶಿವಮೂರ್ತಿ ಮುರುಘಾ ಶರಣರು

ಬಸವಣ್ಣನವರಿಗೆ ಅಲ್ಲಮನಂತಹ ಚಿಕಿತ್ಸಕನನ್ನು ಅನುಭವ ಮಂಟಪದಲ್ಲಿ ಹಿಡಿದಿಟ್ಟುಕೊಳ್ಳುವ ಕೆಲಸ ದೊಡ್ಡದು. ಆತನಿಗೆ ಯಾವುದೇ ರೀತಿಯ ಹಿತಾಸಕ್ತಿ ಇರಲಿಲ್ಲ ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ। ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ನಾಗಾರ್ಜುನ, ಆಚಾರ್ಯ ಶಂಕರರು, ಅಭಿನಂದಪಾದರು ಮೊದಲಾದವರನ್ನು ನೆನಪಿಸಿಕೊಳ್ಳಬೇಕು. ಇವರು ಹೊಸ ಹಾದಿಯನ್ನು ನಿರ್ಮಿಸಿದರು. ಇವರ ನಂತರ ಅಲ್ಲಮಪ್ರಭುಗಳು ಬಂದರು. ಈ ಸಂದರ್ಭದಲ್ಲಿ ತಮಿಳುನಾಡಿನ ನಾಯಾನ್ಮಾರರ ಪರಂಪರೆಗಳನ್ನು ನೋಡಬಹುದು. ಜೈನ ಸಿದ್ಧರು, ಬೌದ್ಧ ಸಿದ್ಧರು ಇನ್ನೂ ಅನೇಕ ಸಿದ್ಧರು ಇದ್ದರು. ನಾಥರು, ಜೈನಸಿದ್ಧರ ಬಗೆಗೆ ಅಲ್ಲಮಪ್ರಭುಗಳು ಮಾತನಾಡುತ್ತಾರೆ. ಅಲ್ಲಮಪ್ರಭುಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾಯಾನ್ಮಾರರನ್ನು ಅರ್ಥೈಸಿಕೊಳ್ಳಬೇಕು ಎಂದು ತಿಳಿಸಿದರು.

ಉತ್ತರ ಅಮೆರಿಕಾದ ವೀರಶೈವ ಸಮಾಜದ ಅಧ್ಯಕ್ಷ ಡಾ। ಶ್ರೀಶೈಲ ಹಾದಿಮನಿ ಮಾತನಾಡಿ, ಅಲ್ಲಮ ಎಂದರೆ ವಿಸ್ತಾರ. ಅಲ್ಲಮನನ್ನು ಶಬ್ದದಲ್ಲಿ ವಿಶ್ಲೇಷಿಸುವುದಾಗಲಿ, ಹಿಡಿದಿಡಿವುದಾಗಲಿ ಕಷ್ಟದ ಕೆಲಸ. ಅಲ್ಲಮಪ್ರಭುಗಳು ಮಹಾನುಭಾವರು. ಅವರ ಮಾತುಗಳು ಜ್ಞಾನಪೂರ್ಣ. ಮಾತು ಯಾವಾಗ ಪವಿತ್ರ ಆಗುತ್ತೆಂದರೆ ನಮ್ಮ ಮನಸ್ಸನ್ನು ಪ್ರೀತಿಸಬೇಕು. ಅಂತಹ ಮಾತುಗಳನ್ನು ದಾರ್ಶನಿಕರು, ಸಂತರು, ಶರಣರು ಹೇಳುತ್ತಾರೆ. ಅವರ ಮಾತನ್ನು ಕೇಳಿದರೆ ಮನಸ್ಸು ಪರಿಶುದ್ಧವಾಗುತ್ತದೆ ಎಂದರು.

ಎಸ್‌ಜೆಎಂ ಕಾಲೇಜಿನ ಪ್ರಾಚಾರ್ಯ ಡಾ। ಪಿ. ಶಿವಲಿಂಗಪ್ಪ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ। ಸಿ.ಟಿ. ಜಯಣ್ಣ ನಿರೂಪಿಸಿದರು. ಪ್ರೊ। ಪಿ.ಸಿ. ಗಾಯತ್ರಿ ಮತ್ತು ಪ್ರೊ। ಎನ್. ಚಲುವರಾಜ್ ಅತಿಥಿಗಳ ಪರಿಚಯ ಮಾಡಿದರು. ಮಕ್ಸೂದ್ ಅಹಮದ್ ವಂದಿಸಿದರು.

PRINCIPAL
S.J.M. Arts College for Women
CHITRADURGA - 577 501
Karnataka.